**Akashvani : Bangalore**
**National Bulletin In Kannada**
**02.12.2024 / 13.10 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**02.12.2024 / 13.10 hrs**

<><*<><>*><>

<u>ಮುಖ್ಯಾಂಶಗಳು</u>

೧. ಸಂಸತ್ತಿನ ಚಳಿಗಾಲದ ಅಧಿವೇಶನ ; ಉಭಯ ಸದನಗಳಲ್ಲಿ ಪ್ರತಿಪಕ್ಷಗಳ ಗದ್ದಲ ಮುಂದುವರಿಕೆ ; ಕಲಾಪ ನಾಳೆಗೆ ಮುಂದೂಡಿಕೆ

೨. ಮೂರು ದಿನಗಳ ೧೪ನೇ ಏಷ್ಯಾ ಓಷಿಯಾನಿಯಾ ಹವಮಾನ ಉಪಗ್ರಹ ಬಳಕೆದಾರರ ಸಮಾವೇಶ ನವದೆಹಲಿಯಲ್ಲಿ ಆಯೋಜನೆ

೩. ಇದೇ ೪ ರಂದು ಒಡಿಶಾದ ಪುರಿಯಲ್ಲಿ ನೌಕಾಪಡೆ ದಿನಾಚರಣೆ

೪. ಕಿರಿಯರ ಏಷ್ಯಾಕಪ್ ಹಾಕಿ ಟೂರ್ನಿ ; ಸೆಮಿಫೈನಲ್ ಪ್ರವೇಶಿಸಿದ ಭಾರತ

<><*<><>*><>

ಸಂಸತ್ತಿನ ಚಳಿಗಾಲದ ಅಧಿವೇಶನದ ಐದನೇ ದಿನವಾದ ಇಂದು ಉಭಯ ಸದನಗಳಲ್ಲಿ ಪ್ರತಿಪಕ್ಷಗಳ ಗದ್ದಲದ ನಡುವೆ ಲೋಕಸಭೆ ಹಾಗೂ ರಾಜ್ಯಸಭಾ ಕಲಾಪಗಳನ್ನು ನಾಳೆಗೆ ಮುಂದೂಡಲಾಯಿತು. ಇಂದು ಬೆಳಗ್ಗೆ ೧೧ ಗಂಟೆಗೆ ಲೋಕಸಭಾ ಕಲಾಪ ಆರಂಭವಾಗುತ್ತಿದ್ದಂತೆ ಲೋಕಸಭಾಧ್ಯಾಕ್ಷ ಓಂ ಬಿರ್ಲಾ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಂಡರು. ಆದರೆ ಪ್ರತಿಪಕ್ಷಗಳಾದ ಕಾಂಗ್ರೆಸ್, ಡಿಎಂಕೆ ಹಾಗೂ ಎಡಪಕ್ಷಗಳು ಘೋಷಣೆಗಳನ್ನು ಕೂಗುತ್ತ ಪ್ರಮುಖ ಕೈಗಾರಿಕೋದ್ಯಮಿಯೊಬ್ಬರ ವಿರುದ್ಧ ಲಂಚ ಆರೋಪ, ಸಂಭಾಲ್ ಮತ್ತು ಮಣಿಪುರ ಹಿಂಸಾಚಾರ ಸೇರಿ ಇನ್ನಿತರ ವಿಷಯಗಳ ಚರ್ಚೆಗೆ ಆಗ್ರಹಿಸಿ ಪ್ರತಿಪಕ್ಷಗಳು ಗದ್ದಲ ಮುಂದುವರೆಸಿದ ಪರಿಣಾಮ ಲೋಕಸಭಾ ಅಧ್ಯಕ್ಷರು ಕಲಾಪವನ್ನು ೧೨ ಗಂಟೆಗೆ ಮುಂದೂಡಲಾಯಿತು ೧೨ ಗಂಟೆಗೆ ಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ ಸಂಧ್ಯಾರಾಯ್ ಸದನದ ಅಧ್ಯಕ್ಷತೆ ವಹಿಸಿದರು. ಬಳಿಕವೂ ಪ್ರತಿಪಕ್ಷಗಳ ಗದ್ದಲ ಮುಂದುವರೆದ ಹಿನ್ನೆಲೆ ಸದನವನ್ನು ನಾಳೆಗೆ ಮುಂದೂಡಲಾಯಿತು. ರಾಜ್ಯಸಭೆಯಲ್ಲೂ ಸಭಾಪತಿ ಜಗದೀಪ್ ಧನ್‌ಕರ್ ಎಲ್ಲ ಸದಸ್ಯರು ಸದನ ಸುಗಮವಾಗಿ ನಡೆಯುವಂತೆ ಸಹಕರಿಸಲು ಕೋರಿದರೂ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಪ್ರತಿಪಕ್ಷಗಳು ಗದ್ದಲ ಮುಂದುವರೆಸಿದ ಪರಿಣಾಮ ಕಲಾಪವನ್ನು ಮುಂದೂಡಲಾಯಿತು.

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ವಿಶೇಷಚೇತನರ ಸಬಲೀಕರಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಗಳನ್ನು ನಾಳೆ ಅಂತಾರಾಷ್ಟ್ರೀಯ ವಿಕಲಚೇತನರ ದಿನದಂದು ಪ್ರದಾನ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಒಟ್ಟು ೨೨ ವ್ಯಕ್ತಿಗಳು ಮತ್ತು ೧೧ ಸಂಸ್ಥೆಗಳಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಲಾಗುವುದು. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ಈ ಸಂದರ್ಭದಲ್ಲಿ ವಿಕಲಚೇತನರ ಸಬಲೀಕರಣಕ್ಕಾಗಿ ಹಲವಾರು ಕಲ್ಯಾಣ ಉಪಕ್ರಮಗಳನ್ನು ಅನಾವರಣಗೊಳಿಸಲಿದ್ದಾರೆ. ಅಮರ್

ಜೈನ್ ಅವರು ಸರ್ವಶ್ರೇಷ್ಠ ದಿವ್ಯಾಂಗಜನ್-೨೦೨೪ ರ ವಿಭಾಗದಲ್ಲಿ ವೈಯಕ್ತಿಕ ಶ್ರೇಷ್ಠತೆಗಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ. ಅಮರ್ ಜೈನ್ ತಮ್ಮ ಸ್ಫೂರ್ತಿದಾಯಕ ಜೀವನ ಕಥೆಯನ್ನು ಹಂಚಿಕೊಂಡರು ಮತ್ತು ಅವರು ತಮ್ಮ ಪ್ರಯಾಣದಲ್ಲಿ ಎದುರಿಸಿದ ಅಡೆತಡೆಗಳ ಬಗ್ಗೆ ಮಾತನಾಡಿದರು. ೭೫ ಪ್ರತಿಶತ ಚಲನವಲನ ಅಸಾಮರ್ಥ್ಯ ಹೊಂದಿರುವ ಪ್ರತೀಕ್ ಖಂಡೇಲ್ವಾಲ್ ಅವರು ಸರ್ವಶ್ರೇಷ್ಠ ದಿವ್ಯಾಂಗಜನ್-೨೦೨೪ ರ ವಿಭಾಗದಲ್ಲಿ ವೈಯಕ್ತಿಕ ಶ್ರೇಷ್ಠತೆಗಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ. ಅವರು 'ರ್‍ಯಾಂಪ್ ಮೈ ಸಿಟಿ' ಸಂಸ್ಥೆ ಸ್ಥಾಪಕರಾಗಿದ್ದಾರೆ.

<><*<><>*><>

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಆರೋಗ್ಯ ವಲಯವನ್ನು ಹೆಚ್ಚು ಕೈಗೆಟುಕುವಂತೆ ಮಾಡುತ್ತಿದೆ ಎಂದು ಕೇಂದ್ರ ಸಚಿವ ಡಾ. ಮನ್ಸುಖ್ ಮಾಂಡವೀಯ ಹೇಳಿದ್ದಾರೆ. ನವದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ೨೦೧೪ರಲ್ಲಿ ದೇಶದಲ್ಲಿ ೩೮೭ ವೈದ್ಯಕೀಯ ಕಾಲೇಜುಗಳಿದ್ದವು. ಆದರೆ ಒಂದೇ ದಶಕದಲ್ಲಿ ಅದರ ಸಂಖ್ಯೆ ದ್ವಿಗುಣಗೊಂಡಿದ್ದು, ಈಗ ೭೮೦ ವೈದ್ಯಕೀಯ ಕಾಲೇಜುಗಳಿವೆ. ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ ವಿಶ್ವದ ಅತಿದೊಡ್ಡ ವೈದ್ಯಕೀಯ ಯೋಜನೆಯಾಗಿ ಹೊರಹೊಮ್ಮಿದೆ ಎಂದರು. ಈ ಯೋಜನೆಯಡಿ ಸುಮಾರು ೧೨ ಕೋಟಿ ಕುಟುಂಬಗಳು ೫ ಲಕ್ಷ ರೂಪಾಯಿಯ ಆರೋಗ್ಯ ಸೇವೆಗಳನ್ನು ಪಡೆಯುತ್ತಿವೆ. ಈಗ ಈ ಯೋಜನೆಯನ್ನು ೭೦ ಹಾಗೂ ಅದಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೂ ವಿಸ್ತರಿಸಲಾಗಿದೆ. ಉತ್ತಮ ಮೂಲಸೌಕರ್ಯ, ಕೌಶಲ್ಯಯುತ ಸಿಬ್ಬಂದಿ, ವೈದ್ಯಕೀಯ ಸಂಶೋಧನೆಗಳು, ಔಷಧಿಗಳ ಲಭ್ಯತೆ ಹಾಗೂ ಮತ್ತಿತರ ಅಭಿವೃದ್ಧಿಗಾಗಿ ಆರೋಗ್ಯ ವಲಯದಲ್ಲಿ ನಿರಂತರವಾಗಿ ಕೆಲಸಗಳು ನಡೆಯುತ್ತಿವೆ ಎಂದು ತಿಳಿಸಿದರು.

<><*<><>*><>

ಪಶ್ಚಿಮ ಬಂಗಾಳ ವಿಧಾನಸಭೆಗೆ ನೂತನವಾಗಿ ಆಯ್ಕೆಯಾಗಿರುವ ೬ ಸದಸ್ಯರಿಗೆ ಪಶ್ಚಿಮ ಬಂಗಾಳ ರಾಜ್ಯಪಾಲ ಡಾ. ಸಿ.ವಿ. ಆನಂದ್ ಬೋಸ್ ಪ್ರಮಾಣ ವಚನ ಬೋಧಿಸಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಉಪಸ್ಥಿತರಿರಲಿದ್ದಾರೆ. ಇತ್ತೀಚೆಗೆ ಮುಕ್ತಾಯಗೊಂಡ ಉಪಚುನಾವಣೆಯಲ್ಲಿ ಆಯ್ಕೆಗೊಂಡ ಈ ಆರೂ ಸದಸ್ಯರು ತೃಣಮೂಲ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದಾರೆ.

<><*<><>*><>

೧೪ನೇ ಏಷ್ಯಾ-ಓಷಿಯಾನಿಯಾ ಹವಾಮಾನ ಉಪಗ್ರಹ ಬಳಕೆದಾರರ ಸಮಾವೇಶ ಎಯುಎಂಎಸ್‌ಯುಕೆ-೧೪ ನವದೆಹಲಿಯಲ್ಲಿ ಈ ತಿಂಗಳ ೪ ರಿಂದ ೬ ರವರೆಗೆ ನಡೆಯಲಿದ್ದು, ಭೂ ವಿಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ೩ ದಿನಗಳ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಭೂ ವಿಜ್ಞಾನ ಸಚಿವಾಲಯ ಮತ್ತು ಭಾರತ ಹವಾಮಾನ ಇಲಾಖೆ ಆಯೋಜಿಸಿರುವ ಈ ಸಮ್ಮೇಳನ ಭಾಷಣಗಳು, ಪೋಸ್ಟರ್ ಪ್ರಸ್ತುತಿಗಳು, ವಿಚಾರಗೋಷ್ಠಿಗಳು ಮತ್ತು ಹವಾಮಾನಕ್ಕೆ ಪ್ರಸ್ತುತ ಉಪಗ್ರಹ ದತ್ತಾಂಶವನ್ನು ಅನ್ವಯಿಸುವ ತರಬೇತಿ ಕಾರ್ಯಾಗಾರವನ್ನು ಒಳಗೊಂಡಿರುತ್ತದೆ. ಈ ಸಮ್ಮೇಳನದ ಮೊದಲ ಆವೃತ್ತಿಯನ್ನು ೨೦೧೦ ರಲ್ಲಿ ಚೀನಾದ ಬೀಜಿಂಗ್‌ನಲ್ಲಿ ನಡೆಸಲಾಗಿತ್ತು. ಅಂದಿನಿಂದ, ಏಷ್ಯಾ ಮತ್ತು ಓಷಿಯಾನಿಯಾದ ವಿವಿಧ ಸ್ಥಳಗಳಲ್ಲಿ ಸಮ್ಮೇಳನವನ್ನು ವಾರ್ಷಿಕವಾಗಿ ಆಯೋಜಿಸಿಕೊಂಡು ಬರಲಾಗುತ್ತಿದೆ.

<><*<><>*><>

ಬರುವ ೧೦ ವರ್ಷಗಳಲ್ಲಿ ಭಾರತೀಯ ನೌಕಾಪಡೆಗೆ ೯೬ ಹಡಗು ಹಾಗೂ ಜಲಾಂತರ್ಗಾಮಿ ನೌಕೆಗಳನ್ನು ಸೇರ್ಪಡೆಗೊಳಿಸಲಾಗುವುದು ಎಂದು ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು ವಾರ್ಷಿಕ ನೌಕಾ ದಿನದ ಕುರಿತ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ೬೨ ಹಡಗುಗಳು ಹಾಗೂ ಒಂದು ಜಲಾಂತರ್ಗಾಮಿ ನೌಕೆ ನಿರ್ಮಾಣ ಹಂತದಲ್ಲಿದ್ದು, ಮುಂದಿನ ವರ್ಷದವರೆಗೆ ಪ್ರತಿತಿಂಗಳು ತಲಾ ಒಂದು ಹಡಗನ್ನು ಸೇರ್ಪಡೆಗೊಳಿಸಲಾಗುವುದು ಎಂದರು. ಈ ಬಾರಿಯ ನೌಕಾಪಡೆ ದಿನವನ್ನು ಇದೇ ೪ ರಂದು ಒಡಿಶಾದ ಪುರಿಯಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಚೀನಾ ಸಹಕಾರದೊಂದಿಗೆ ಪಾಕಿಸ್ತಾನ್ ನೌಕೆಪಡೆಯ ಯುದ್ಧಹಡಗು ಹಾಗೂ ಜಲಾಂತರ್ಗಾಮಿ ನೌಕೆಯನ್ನು ಅಭಿವೃದ್ಧಿಪಡಿಸುತ್ತಿದೆ. ಪಾಕಿಸ್ತಾನ್ ನೌಕೆಯ ಸಾಮರ್ಥ್ಯ ಹೆಚ್ಚುತ್ತಿರುವ ಸಂದರ್ಭದಲ್ಲಿ ಎಲ್ಲ ಬೆದರಿಕೆಗಳನ್ನು ಸಮರ್ಥವಾಗಿ ಎದುರಿಸಲು ಭಾರತ ಸಂಪೂರ್ಣವಾಗಿ ಸಜ್ಜಾಗಿದೆ ಎಂದು ತಿಳಿಸಿದರು. ಇತ್ತೀಚಿನ ಐಎನ್ಎಸ್ ಅರಿಘಾಟ್‌ನಿಂದ ನಡೆಸಿದ ಅಣು ಸಾಮರ್ಥ್ಯದ ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿದೆ ಎಂದು ಇದೇ ವೇಳೆ ಮಾಹಿತಿ ನೀಡಿದರು.

<><*<><>*><>

ಮರುಭೂಮಿಕರಣದ ನಿಗ್ರಹಕ್ಕಾಗಿ ೧೬ನೇ - ಕಾಪ್-೧೬ ವಿಶ್ವಸಂಸ್ಥೆ ಸಮಾವೇಶ ಇಂದು ಸೌದಿ ಅರೇಬಿಯಾದ ರಿಯಾಧ್‌ನಲ್ಲಿ ಪ್ರಾರಂಭವಾಗಲಿದೆ. ಪಶ್ಚಿಮ ಏಶಿಯಾ ಇದುವರೆಗೆ ಈ ಮಹತ್ವದ ಪರಿಸರ ಸಂಬಂಧಿತ ಸಮ್ಮೇಳನವನ್ನು ಮೊದಲ ಬಾರಿಗೆ ಆಯೋಜಿಸುತ್ತಿದೆ. ಭಾರತ ಸೇರಿದಂತೆ ೧೯೭ ರಾಷ್ಟ್ರಗಳ ಪ್ರತಿನಿಧಿಗಳು ಈ ಮಹತ್ವದ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ವರ್ಷ ಯುಎನ್‌ಸಿಸಿಡಿ ಯ ೩೦ನೇ ವಾರ್ಷಿಕೋತ್ಸವವೂ ಆಗಿದೆ. ಕೇಂದ್ರ ಪರಿಸರ ಸಚಿವ ಭೂಪೆಂದ್ರ ಯಾದವ್ ಮತ್ತು ಹರಿಯಾಣ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿಯವರ ನೇತೃತ್ವದಲ್ಲಿ, ಭಾರತದ ನಿಯೋಗ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದೆ. ವಾಯವ್ಯ ಭಾರತದ ೪ ರಾಜ್ಯಗಳ ೧.೧೫ ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭೂಮಿಯ ಗುಣಮಟ್ಟ ಹೆಚ್ಚಿಸಲು ರೂಪಿಸಲಾಗಿರುವ ಉಪಕ್ರಮವಾದ ಅರವಳ್ಳಿ ಗ್ರೀನ್ ವಾಲ್ ಯೋಜನೆ-ಎಜಿಡಬ್ಲ್ಯುಪಿ ಅನ್ನು ಸಮ್ಮೇಳನದಲ್ಲಿ ಪ್ರಸ್ತುತಪಡಿಸಲಿದೆ. ಕಾರ್ಯಕ್ರಮಕ್ಕೂ ಮುನ್ನ ಕೇಂದ್ರ ಪರಿಸರ ಸಚಿವ ಭೂಪೆಂದ್ರ ಯಾದವ್ ಅಲ್ಲಿನ ಭಾರತದ ರಾಯಭಾರಿ ಕಚೇರಿಗೆ ಭೇಟಿ ನೀಡಿ ಅದರ ಆವರಣದಲ್ಲಿ ಸಸಿ ನೆಟ್ಟರು. ಈ ಎರಡು ವಾರಗಳ ಸಮ್ಮೇಳನ ಇದೇ ೧೩ ರವರೆಗೆ ನಡೆಯಲಿದ್ದು, ಸೌದಿ ಅರೇಬಿಯಾ ನಡೆಸಿದ ವಿಶ್ವದ ಅತ್ಯಂತ ದೊಡ್ಡ ಬಹುರಾಷ್ಟ್ರೀಯ ಕಾರ್ಯಕ್ರಮವಾಗಿದೆ. ಇದು ದೇಶಗಳು, ಉದ್ಯಮಗಳು ಮತ್ತು ನಾಗರಿಕ ಸಮಾಜಗಳಿಗೆ ಸುಸ್ಥಿರ ಭೂಮಿಯ ನಿರ್ವಹಣಾ ಪರಿಹಾರಗಳಲ್ಲಿ ಸಹಕಾರ ಮಾಡಲು ಜಾಗತಿಕ ವೇದಿಕೆ ಒದಗಿಸುತ್ತದೆ. ಈ ಕಾರ್ಯಕ್ರಮದಲ್ಲಿ ಅರಣ್ಯ ತಜ್ಞರು, ಸಚಿವರು ಮತ್ತು ಸಂರಕ್ಷಣಾ ನಾಯಕರ ನಡುವೆ ಚರ್ಚೆಗಳು ನಡೆಯಲಿವೆ.

<><*<><>*><>

ಫೆಂಗಲ್ ಚಂಡಮಾರುತವು ಅಪ್ಪಳಿಸಿದ ಒಂದು ದಿನದ ನಂತರ ಪುದುಚೇರಿ ಸಹಜ ಸ್ಥಿತಿಗೆ ಮರಳಲು ಸಾಧ್ಯವಾಗುತ್ತಿಲ್ಲ. ಇದು ಮೂರು ದಶಕಗಳಲ್ಲೇ ಕೇಂದ್ರಾಡಳಿತ ಪ್ರದೇಶ ಕಂಡ ಅತಿ ಹೆಚ್ಚು ಮಳೆ ಇದಾಗಿದೆ. ನಿನ್ನೆ ಸಂಜೆ ವೇಳೆಗೆ ಮಳೆ ನಿಂತಿದ್ದು, ತಗ್ಗು ಪ್ರದೇಶದ ಜನವಸತಿ ಪ್ರದೇಶಗಳು ತೀವ್ರ ಜಲಾವೃತಗೊಂಡಿದ್ದು, ೨೦೦ ಕ್ಕೂ ಹೆಚ್ಚು ಜನರು ಪರಿಹಾರ ಶಿಬಿರಗಳಲ್ಲಿ ಇದ್ದಾರೆ. mನಿನ್ನೆ, ಭಾರತೀಯ ಸೇನೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ವಿವಿಧ ಇಲಾಖೆಗಳನ್ನು ಒಳಗೊಂಡ ಬೃಹತ್ ಸಂಯೋಜಿತ ರಕ್ಷಣಾ ಕಾರ್ಯಾಚರಣೆಯು ಮಳೆಯಲ್ಲಿ ಸಿಲುಕಿದ್ದ ನೂರಾರು ನಿವಾಸಿಗಳನ್ನು ಸ್ಥಳಾಂತರಿಸುವುದನ್ನು ಖಚಿತಪಡಿಸಿದೆ. ತಮಿಳುನಾಡಿನಲ್ಲಿ, ಫೆಂಗಲ್ ಚಂಡಮಾರುತವು ಅರಬ್ಬಿ ಸಮುದ್ರವನ್ನು ತಲುಪುವತ್ತ ಮುನ್ನಡೆಯುತ್ತಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಸಾಧಾರಣದಿಂದ

ಭಾರೀ ಮಳೆ ಮುಂದುವರೆದಿದೆ. ಇನ್ನೂ ೨೪ ಗಂಟೆಗಳ ಕಾಲ ಕರಾವಳಿಯ ಕೆಲವೆಡೆ ವ್ಯಾಪಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><*<><>*><>

ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟುವುದು ಮತ್ತು ಸುಸ್ಥಿರ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುವ ನಡುವೆ ನಿರ್ಣಾಯಕ ಸಮತೋಲನ ಕಾಯ್ದುಕೊಳ್ಳಲು ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯಿರುವ ದೇಶಗಳಿಗೆ ಭಾರತ ಕರೆ ನೀಡಿದೆ. ದಕ್ಷಿಣ ಕೊರಿಯಾದ ಬುಸ್ಸಾನ್‌ನಲ್ಲಿ ನಡೆದ ಅಂತರ್-ಸರ್ಕಾರಿ ಸಮಾಲೋಚನಾ ಸಮಿತಿಯ ೫ನೇ ಅಧಿವೇಶನದಲ್ಲಿ ಭಾರತ, ಪ್ಲಾಸ್ಟಿಕ್ ಮಾಲಿನ್ಯದ ಸವಾಲಿನ ಗಂಭೀರತೆಯನ್ನು ಪುನರುಚ್ಚರಿಸಿತು. ಇದು ಕಷ್ಟಕರವಾದ ಕೆಲಸವಾಗಿದ್ದು, ಪರಸ್ಪರ ನಂಬಿಕೆ ಮತ್ತು ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದೆ. ಪ್ರಾಥಮಿಕ ಪ್ಲಾಸ್ಟಿಕ್ ಪಾಲಿಮರ್ ಉತ್ಪಾದನೆಯನ್ನು ಬೆಂಬಲಿಸುವ ಯಾವುದೇ ಕ್ರಮಕ್ಕೆ ಭಾರತ ಒಮ್ಮತ ಸೂಚಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಸದಸ್ಯ ರಾಷ್ಟ್ರಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸಲು ಮೀಸಲಾದ ಬಹುಪಕ್ಷೀಯ ನಿಧಿಯ ಅಗತ್ಯವನ್ನು ಭಾರತ ಇದೇ ವೇಳೆ ಒತ್ತಿಹೇಳಿದೆ.

<><*<><>*><>

ಒಮನ್‌ನ ಮಸ್ಕತ್‌ನಲ್ಲಿ ಆಯೋಜಿಸಲಾಗಿರುವ ಕಿರಿಯರ ಏಷ್ಯಾಕಪ್ ಹಾಕಿ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ನಿನ್ನೆ ಭಾರತ ದಕ್ಷಿಣ ಕೊರಿಯಾ ತಂಡವನ್ನು ೮-೧ ಗೋಲುಗಳ ಅಂತರದಲ್ಲಿ ಮಣಿಸಿ ಸೆಮಿಫೈನಲ್ ಪ್ರವೇಶಿಸಿದೆ. ಭಾರತದ ಪರ ಹರ್ಷದೀಪ್ ಸಿಂಗ್ ೩ ಗೋಲು ಗಳಿಸಿದರೆ ಅರಿಜಿತ್ ಸಿಂಗ್ ಹುಂಡಾಲ್ ೨ ಗೋಲು ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ನಾಳೆ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಮಲೇಷಿಯಾ ತಂಡವನ್ನು ಎದುರಿಸಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ